# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎಸ್. ವಿ. ಸಂಕನೂರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1036

ಉತ್ತರಿಸಬೇಕಾದ ದಿನಾಂಕ : 27.12.2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉತ್ತರಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಗ್ರಾಮೀಣ ಸೇವಾ ಸಹಕಾರಿ ಸಂಘ ಶಿರಾಲಿಯವರು ಲೋಕೋಪಯೋಗಿ ಇಲಾಖೆಯಿಂದ ಅನುಮತಿ ಪಡೆದ ಅಂದಾಜು ಪಟ್ಟಿಯ ಮೊತ್ತ ಮೀರಿ ಇಲಾಖೆಯ ಅನುಮತಿ ಪಡೆಯದೆ ಗುತ್ತಿಗೆದಾರರಿಗೆ ಹಣ ಸಂದಾಯ ಮಾಡಿರುವುದು ನಿಜವೇ: | ಭಟ್ಕಳ ತಾಲೂಕಿನ ಗ್ರಾಮೀಣ ಸೇವಾ ಸಹಕಾರ ಸಂಘ ನಿ., ಶಿರಾಲಿ ಈ ಸಂಘವು 2015-16ನೇ ಸಾಲಿನಲ್ಲಿ ರೂ.24.42 ಲಕ್ಷಗಳನ್ನು ಕಟ್ಟಡ ನಿಧಿಯಿಂದಲೂ ಹಾಗೂ ರೂ.19.93 ಲಕ್ಷಗಳನ್ನು ಆಪದ್ಧನ ನಿಧಿಯಿಂದಲೂ ಉಪಯೋಗಿಸಿಕೊಂಡು ಒಟ್ಟು ರೂ.44.35 ಲಕ್ಷ ಗಳ ವೆಚ್ಚದಲ್ಲಿ ಸಂಘದ ನೂತನ ಕಟ್ಟಡ ನಿರ್ಮಿಸಲು ಲೋಕೋಪಯೋಗಿ ಇಂಜಿನಿಯರ್‌ರಿಂದ ಅನುಮೋದಿಸಲ್ಪಟ್ಟ ನಕಾಶೆ ಮತ್ತು ಅಂದಾಜು ಪಟ್ಟಿಯೊಂದಿಗೆ ಆಡಳಿತಾತ್ಮಕ ಅನುಮತಿ ಪಡೆಯಲು ಸಲ್ಲಿಸಿದ್ದ ಪ್ರಸ್ತಾವನೆ ಪರಿಶೀಲಿಸಿ, ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾವಿ ಪ್ರಾಂತ ಇವರು ಜೆಆರ್ ಎಲ್/ಎ/211/ಪಿಎಲ್‌ಎನ್/2015-16 ದಿನಾಂಕ: 31.12.2021ರ ಆದೇಶದನ್ವಯ ಸಂಘದ ಕಟ್ಟಡ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತಾರೆ.<br><br>ಈ ರೀತಿ ಅನುಮೋದನೆ ನೀಡಿರುವ ಮೊತ್ತವನ್ನು ಹೊರತುಪಡಿಸಿ ಸದರಿ ಸಂಘದವರು ರೂ.7.62 ಲಕ್ಷಗಳನ್ನು ಸಂಘಕ್ಕೆ ಇಲಾಖಾ ಅನುಮತಿ ಇಲ್ಲದೇ ಹೆಚ್ಚುವರಿಯಾಗಿ ಖರ್ಚು ಮಾಡಿರುವುದು ಕಂಡುಬಂದಿರುತ್ತದೆ. |
| ಆ) | ಸ್ಥಳೀಯ ಗ್ರಾಮ ಪಂಚಾಯತ್ ನಿಂದ ಕಟ್ಟಡ ಪರವಾನಿಗೆ ಪಡೆಯುವಲ್ಲಿ ತೆರಿಗೆ ವಂಚಿಸಿರುವ ಬಗ್ಗೆ ಹಾಗೂ ಸಿಬ್ಬಂದಿಗಳ ನೇಮಕಾತಿಯಲ್ಲಿ ನಡೆಸಿರುವ ಅವ್ಯವಹಾರದ | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. |

| | | |
|---|---|---|
| | ಕುರಿತು ನಿಯಮ 64 ಮತ್ತು 29ಸಿ ರಡಿ ವಿಚಾರಣೆ ನಡೆಯುತ್ತಿರುವುದು ಹಾಗೂ ಉಚ್ಚ ನ್ಯಾಯಾಲಯವು 3 ತಿಂಗಳಲ್ಲಿ ವಿಚಾರಣೆ ನಡೆಸಲು ಸೂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಇ) | ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ. | ಸಂಘವು ಕಟ್ಟಡ ನಿರ್ಮಾಣದಲ್ಲಿ ಅನುಮೋದನೆಗಿಂತ ಹೆಚ್ಚುವರಿಯಾಗಿ ವೆಚ್ಚ ಮಾಡಿರುವ ಸಂಬಂಧ ಹಾಗೂ ಸಿಬ್ಬಂದಿ ವೃಂದ ಬಲಕ್ಕೆ ಇಲಾಖಾನುಮತಿ ಪಡೆದುಕೊಳ್ಳದೇ ಸಿಬ್ಬಂದಿಗಳ ನೇಮಕಾತಿ ಮಾಡಿಕೊಂಡಿರುವ ಬಗ್ಗೆ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕುಮಟಾ ಉಪ ವಿಭಾಗ, ಕುಮಟಾರವರು ಆದೇಶ ಸಂಖ್ಯೆ:ಸನಿ-20/ಎ/ವಿಚಾರಣೆ /ಸಿಆರ್-01/2020-21 ದಿನಾಂಕ: 08.09.2020 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64ರ ವಿಚಾರಣೆಗೆ ವಿಚಾರಣಾಧಿಕಾರಿಯನ್ನಾಗಿ ಶ್ರೀಮತಿ ಸರಿತಾ ಎನ್. ಬೇತಾಳಕರ್, ಅಧೀಕ್ಷಕರು, ಸಹಾಯಕ ನಿಬಂಧಕರ ಕಛೇರಿ, ಕುಮಟಾ ಇವರನ್ನು ನೇಮಿಸಿ ಆದೇಶಿಸಿರುತ್ತಾರೆ.<br><br>ಸದರಿ ಆದೇಶವನ್ನು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತುಅಧ್ಯಕ್ಷರು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಇಲ್ಲಿ ರಿಟ್ ಅರ್ಜಿ ಸಂಖ್ಯೆ: 147880/2020 ನ್ನು ದಾಖಲಿಸಿ ದಿನಾಂಕ:29.08.2020 ರಂದು ತಡೆಯಾಜ್ಞೆ ಪಡೆದುಕೊಂಡಿರುತ್ತಾರೆ. ನಂತರ ಸಹಾಯಕ ನಿಬಂಧಕರು, ಕುಮಟಾ ಇವರು ಸರ್ಕಾರಿ ವಕೀಲರ ಮೂಲಕ ಮಾನ್ಯ ನ್ಯಾಯಾಲಯಕ್ಕೆ ತಕರಾರು ಸಲ್ಲಿಸಿ ತಡೆಯಾಜ್ಞೆ ತೆರವುಗೊಳಿಸುವಂತೆ ಕೋರಿದ ಹಿನ್ನೆಲೆಯಲ್ಲಿ ಮಾನ್ಯ ನ್ಯಾಯಾಲಯ ದಿನಾಂಕ:20.07.2021 ರಂದು ತಡೆಯಾಜ್ಞೆ ತೆರವುಗೊಳಿಸಿರುತ್ತದೆ ಹಾಗೂ ರಿಟ್ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಆ ಮೂಲಕ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64ರ |

| | | |
|---|---|---|
| | | ವಿಚಾರಣೆಯನ್ನು ಕೈಗೆತ್ತಿಕೊಂಡು ಈ ಹಿಂದಿನ ವಿಚಾರಣಾಧಿಕಾರಿಯನ್ನು ಬದಲಾಯಿಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿರಸಿ ಉಪ ವಿಭಾಗ, ಶಿರಸಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಆದೇಶ ಸಂಖ್ಯೆ:ಸನಿ 20/ಎ/ವಿಚಾರಣೆ/ಸಿಆರ್-01/2020-21 ದಿನಾಂಕ: 13.09.2021 ರಲ್ಲಿ ನೇಮಕ ಮಾಡಿ ಆದೇಶಿಸಲಾಗಿದೆ. ಅಲ್ಲದೆ ಆದೇಶದ ದಿನಾಂಕದಿಂದ 03 ತಿಂಗಳೊಳಗೆ ವಿಚಾರಣಾ ವರದಿಯನ್ನು ಸಲ್ಲಿಸಲು ತಿಳಿಸಲಾಗಿದೆ.<br><br>ಸಂಘದ ಅಧ್ಯಕ್ಷರಾದ ಶ್ರೀ ವೆಂಕಟೇಶ ನಾರಾಯಣ ನಾಯ್ಕ ಇವರು ಸಂಘದಲ್ಲಿ ಓಡಿ ಸಾಲ ಪಡೆದು ಸುಸ್ತಿಯಾಗಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 29ಸಿ ರಡಿಯಲ್ಲಿಕ್ರಮ ಕೈಗೊಳ್ಳಲು ನೋಟೀಸ್ ಸಂಖ್ಯೆ: ಸಂಖ್ಯೆ:ಸನಿ-20/ಸಿ/ಆರ್‌ಎಸ್‌ಆರ್/ಸಿಆರ್-36/2020-21 ದಿನಾಂಕ:27.01.2021 ರಂತೆ ನೋಟೀಸ್ ಜಾರಿಗೊಳಿಸಿ ವಿವರಣೆ ಕೇಳಲಾಗಿದೆ. ಸದರಿ ನೋಟೀಸ್‌ಗೆ ಸಂಘದ ಅಧ್ಯಕ್ಷರು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:100902/2021ನ್ನು ದಾಖಲಿಸಿದ್ದು ಮಾನ್ಯ ನ್ಯಾಯಾಲಯವು ದಿನಾಂಕ:12.03.2021ರಂದು ತಡೆಯಾಜ್ಞೆ ನೀಡಿರುತ್ತದೆ. |

**ಕಡತ ಸಂಖ್ಯೆ: ಸಿಒ 458 ಸಿಎಲ್‌ಎಸ್ 2022**

**(ಎಸ್. ಟಿ. ಸೋಮಶೇಖರ್)**
**ಸಹಕಾರ ಸಚಿವರು.**